ಪಿ.ಜೆ. ರಾಘವೇಂದ್ರ, ಮೈಸೂರು
*ಸದನದಲ್ಲಿ ಚಿಯರ್ ಗರ್ಲ್ಸ್ ಇದ್ದರೆ ತೂಕಡಿಸುವುದು ತಪ್ಪಬಹುದೆ?*



ಆಹಾ! ಒಳ್ಳೆಯ ಯೋಜನೆ. ನಂತರ ಮಂತ್ರಿಗಳನ್ನು ಸದನದಿಂದ ಹೊರಕ್ಕೆ ಕ್ರೇನ್‌ನಲ್ಲೇ ತರಬೇಕಾದೀತು.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಒಂದೊಮ್ಮೆ ಮನುಷ್ಯನಿಗೆ ತನ್ನ ರೂಪವನ್ನು ಬದಲಾಯಿಸಿಕೊಳ್ಳುವ ಶಕ್ತಿಯಿದ್ದಿದ್ದರೆ...?*
ಯಾವ ಬ್ಯಾಂಕೂ ಸಾಲ ಕೊಡುತ್ತಿರಲಿಲ್ಲ.

ಆರ್. ನಾಗರಾಜ್, ಗೊರೂರು
*ನನ್ನಲ್ಲಿ ಪ್ರೇಮ ನಿವೇದಿಸಿಕೊಳ್ಳಲಾಗದೆ ಅವಳು ಮೈ-ಕೈ ಪರಚಿಕೊಳ್ಳುತ್ತಿದ್ದಾಳಲ್ಲಾ...?*
ಅದು ಪ್ರೇಮ ನಿವೇದಿಸಿಕೊಳ್ಳಲಾಗದ್ದಕ್ಕಲ್ಲ – ನಿಮ್ಮನ್ನು ಕಂಡ ತಕ್ಷಣ ಅವಳಿಗೆ ಅಲರ್ಜಿಯಾಗುವುದರಿಂದ.....

ಆರ್. ಮಧುಸೂದನ್, ಹಾಸನ
*ಕಂಪ್ಯೂಟರ್ ನಿಯಂತ್ರಿಸುವ ಜವಾಬ್ದಾರಿಯನ್ನು ಬೆಕ್ಕಿಗೆ(ಕ್ಯಾಟ್) ಬದಲು ಇಲಿ(ಮೌಸ್)ಗೆ ಕೊಟ್ಟಿರುವುದೇಕೆ?*



ಇ-ಮೇಯ್ಲ್ಸ್, ಇ-ಗವರ್ನೆನ್ಸ್, ಇ-ಪ್ರೊಕ್ಯೂರ್‌ಮೆಂಟ್, ಇ-ಬೇ, ಎಲ್ಲವೂ ಇ-ಲಿ ಶುರುವಾಗೋದ್ರಿಂದ!

ಗುಡಿಬಂಡೆ ಪಾರ್ಥಸಾರಥಿ, ಬಾಗೇಪಲ್ಲಿ
*ಅಪುತ್ರಸ್ಯ ಗತಿರ್ನಾಸ್ತಿ; ಸಪುತ್ರಸ್ಯ...?*
ಗತಿಃ nasty!

ಎಚ್.ಆರ್. ದೇಸಾಯಿ, ರಾಯಚೂರು
*ಒಂದು ಹೆಣ್ಣಿನ ಪತಿಗೂ, ಕರೋಡಪತಿಗೂ ಏನು ವ್ಯತ್ಯಾಸ?*
ಹೆಣ್ಣಿನಿಂದ ಪದೇ ಪದೇ ಹೊರಹಾಕಿಸಿಕೊಂಡು, ಧೂಳು, ಗಾಳಿಯಿಂದ ತುಕ್ಕು ಹಿಡಿದಂತಾದವನೇ ಕರೋಡ್(corrode)ಪತಿ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಮೋಡಗಳು ಢಿಕ್ಕಿ ಹೊಡೆದರೆ ಸಿಡಿಲು, ಗುಡುಗು, ಮಳೆ. ಹುಡುಗ, ಹುಡುಗಿ ಢಿಕ್ಕಿ ಹೊಡೆದರೆ?*
ಗುಡುಗಿನಂತಹ ಬೈಗುಳ, ಸಿಡಿಲಿನಂತಹ ಹೊಡೆತಗಳ ಮಳೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ದೃಷ್ಟಿಯಿಲ್ಲದ ಗಂಡನಿಗೆ ಕಣ್ಣಾಗುವ ಬದಲು ತನ್ನ ಕಣ್ಣಿಗೆ ಬಟ್ಟೆ ಕಟ್ಟಿಕೊಂಡ ಗಾಂಧಾರಿಯ ರೀತಿ ತಪ್ಪಲ್ವಾ ಸರ್?*
ನಡೆಸಲು ಭೀಷ್ಮ, ನುಡಿಸಲು ವಿದುರ ಇರುವಾಗ ತನ್ನದೇನಿದ್ದರೂ gone ದಾರಿಯೇ ಎಂದರಿತು ಹೀಗೆ ಮಾಡಿದಳಂತೆ!

ರವೀಂದ್ರ ಶಿ. ಯಡಹಳ್ಳಿ, ಬೀಳಗಿ
*ಸುಳಿಗೂ, ಸುಳ್ಳಿಗೂ ಇರುವ ವ್ಯತ್ಯಾಸವೇನು ಗುರು?*
ಸುಳಿ ಆಪತ್ತು; ಸುಳ್ಳು ಆಪದ್ಬಾಂಧವ.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಈ ವಿಭಾಗದ ಪ್ರಶ್ನೆ ಉತ್ತರಗಳನ್ನು ಓದಿ ನನ್ನ ಅರ್ಧ ಕಾಯಿಲೆಯೇ ವಾಸಿಯಾಗಿಬಿಟ್ಟಿತಲ್ಲಾ...?*
ಕೂಡಲೆ ಮತ್ತೊಮ್ಮೆ ಓದಿಬಿಡಿ; ಸಂಪೂರ್ಣ ವಾಸಿಯಾಗಿಬಿಡುತ್ತದೆ!

ನಾರಾಯಣ ಎಸ್. ತೋನ್ಸೆ, ವಾಶಿ
*ಜಗತ್ತನ್ನು ಬೆಳಗಲು ಸೂರ್ಯ ಬೇಕು. ಬದುಕನ್ನು ಬೆಳಗಲು ಏನು ಬೇಕು?*
ಷಾರ್ಟ್ ಸರ್ಕ್ಯೂಟ್ ಆಗದ ನಂಬಿಕೆ, ಪವರ್ ಕಟ್ ಆಗದ ಪ್ರೀತಿ, ಗ್ರೌಂಡ್ ಆಗದ ಉತ್ಸಾಹ.

ಪಿ. ಶಂಕರಪ್ಪ, ಶಿವಮೊಗ್ಗ
*ಯಾವ ಕ್ಷೇತ್ರದಲ್ಲಿ ನೋಡಿದರೂ ಲಾಬಿ, ಹಗರಣಗಳೇ ಹೆಚ್ಚು. ಇದಕ್ಕೆ ಪರಿಹಾರವಿದೆಯೆ?*
ಇದೆ; ಪ್ರತಿ ಪತ್ನಿಯೂ ತನ್ನ ಪತಿಯ ಅಕ್ರಮ ಸಂಪಾದನೆಯನ್ನು ಧಿಕ್ಕರಿಸಿದರೆ ಲಾಬಿ, ಹಗರಣಗಳಿಗೆ ಲಗಾಮು!

ಕೌಶಿಕ್ ರಾಜ್, ಹನುಮನಾಳು
*ಉಪ್ಪು ತಿಂದವರು ನೀರು ಕುಡಿಯುತ್ತಾರೆ. ಸಿಹಿ ಮತ್ತು ಖಾರ ತಿಂದವರು?*
ತಿಂದ ನಂತರ ಕುಡಿಯುವವರಾದರೆ ಕಾಫಿ, ಚಹಾ; ತಿನ್ನುತ್ತಾ ಕುಡಿಯುವವರಾದರೆ ಬೀರ್.

## ಬಹುಮಾನಿತ ಪ್ರಶ್ನೆ

ಎಚ್.ಜಿ. ಜಗದೀಶ್, ಮೈಸೂರು
*ಆಸ್ಪತ್ರೆಗಳಲ್ಲಿ 'ಸ್ತ್ರೀರೋಗ' ತಜ್ಞರು ಎಂದು ಫಲಕ ಹಾಕಿರುತ್ತಾರಲ್ಲ, 'ಸ್ತ್ರೀ' ಎನ್ನುವುದು ಒಂದು ರೋಗವೇ?*
ಹೌದು. ಟೀನೇಜಿಂದ ಓಲ್ಡೇಜ್ ವರೆಗೆ ಗಂಡಿನ ಮನವನ್ನು ಕಾಡುವ ಮಹಾರೋಗ.

ಕುಮಾರ ಚಲವಾದಿ, ಹೊಳೆನರಸಿಪುರ
*ಹೆಂಡತಿಯಿಂದ ಹೊಗಳಿಸಿಕೊಳ್ಳಲು ಏನು ಮಾಡಬೇಕು?*
ಹೆಂಡತಿ, ಅತ್ತೆ, ಮಾವ, ಬಾವಮೈದ, ನಾದಿನಿಯರ ಸೇವೆಯನ್ನು ನಿರಂತರವಾಗಿ ಮಾಡಿ. ವರ್ಷಕ್ಕೊಮ್ಮೆ ಹೊಗಳಿಕೆ ಸಿಕ್ಕೀತು!

ಚನ್ನಬಸವ ಪುತ್ತೂರು, ಚಿತ್ರದುರ್ಗ
*ಉತ್ತರವಿಲ್ಲದ ಪ್ರಶ್ನೆಗಳನ್ನು ಹೇಗೆ ಎದುರಿಸುತ್ತೀರಿ?*
ಪೂರ್ವ, ಪಶ್ಚಿಮ ಮತ್ತು ದಕ್ಷಿಣದಿಂದ.

ರಮೇಶ. ಜಿ. ಬೊಂಗಾಳೆ, ಬೈಲಹೊಂಗಲ
*ಹೋಟೇಲುಗಳಿಗಿಂತ ಬಾರ್‌ಗಳು ಬೆಳಗಿನ ಜಾವ ಬೇಗ ತೆರೆಯುತ್ತವಲ್ಲಾ, ಏಕೆ ಸಾರ್?*



ರಾತ್ರಿ ಫುಲ್ ಟೈಟ್ ಆಗಿ ಬಿದ್ದಿದ್ದವರು ಎದ್ದುಹೋಗಲೆಂದು.

ಏಕಾಂಗಿನಿ, ಬೆಂಗಳೂರು
*ನಮ್ಮ ಜೀವನದಲ್ಲಿ ಕನಿಷ್ಠ ಮೂರು ಸಲವಾದರೂ ಮದುವೆಯಾಗಲು ಅವಕಾಶವಿರುತ್ತಿದ್ದರೆ ಹೇಗಿರುತ್ತಿತ್ತು?*
ಬಹಳ ಧೈರ್ಯವಂತೆಯಮ್ಮ ನೀವು. ಎಲ್ಲರೂ ಒಂದು ಅತ್ತೆಯೇ ಒಂದು ಜೀವಮಾನಕ್ಕೆ ಸಾಕು ಎನ್ನುವಾಗ......

ಶರ್ವಾಣಿ, ಮೈಸೂರು
*ಹುಟ್ಟಿದ ಕೂಡಲೆ ಮಗು ಅಳುವುದು ಏತಕ್ಕೆ?*
ಅದು ಅಳುವಲ್ಲ; ಮಗು ಎಂಬ ಮಾನವ ಮೊಬೈಲ್‌ನ ರಿಂಗ್‌ಟೋನ್!

■ ರಾಮ್